ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 18/07/2019

# ಸುಪ್ರೀಂ ಇಟ್ಟಿರುವ ವಿಶ್ವಾಸಕ್ಕೆ ಧಕ್ಕೆ ತರಲ್ಲ

ಉದಯ 18/7/19

[illegible] ಬದ್ಧನಾಗಿ ಸುಪ್ರೀಂ ಕೋರ್ಟ್ ಸ್ಪೀಕರ್ ಸ್ಥಾನದ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳುತ್ತೇನೆ. ಕಾಲಮಿತಿಯಲ್ಲಿ ಶಾಸಕರ ರಾಜೀನಾಮೆ ಪ್ರಕರಣವನ್ನು ಇತ್ಯರ್ಥಪಡಿಸುತ್ತೇನೆಂದು ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ಗೌರವದಿಂದ ಸ್ವಾಗತಿಸುತ್ತೇನೆ. ಇಲ್ಲಿ ಯಾರೂ ಗೆದ್ದಿಲ್ಲ, ಯಾರೂ ಸೋತಿಲ್ಲ. ಸಂವಿಧಾನ ಗೆದ್ದಿದೆ. ವಿಜೃಂಭಿಸಿದೆ. ನನ್ನ ಮೇಲೆ ದೊಡ್ಡ ಭಾರ ಇದೆ ಎಂದು ತಿಳಿಸಿ ಅತ್ಯಂತ ಗೌರವಯುತವಾಗಿ ನಡೆದುಕೊಳ್ಳುತ್ತೇನೆ' ಎಂದರು.

'ನಾನು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ದಿನದಿಂದ ಭಾಷೆಯನ್ನು ಉತ್ತಮ ಪಡಿಸಿಕೊಂಡಿದ್ದೇನೆ. ನಡವಳಿಕೆಯನ್ನು ಸುಧಾರಿಸಿಕೊಂಡಿದ್ದೇನೆ. ಜವಾಬ್ದಾರಿ ಹೆಚ್ಚಿಸಿಕೊಂಡು ವಿಶ್ವಾಸ ಗಳಿಸುವ ಪ್ರಯತ್ನ ನಡೆಸಿದ್ದೇನೆ. ಸಾರ್ವಜನಿಕರ ಅಭಿಪ್ರಾಯಕ್ಕೆ ತಲೆ ಬಾಗಿ ನಡೆದಿದ್ದೇನೆ. ಮುಂದೆಯೂ ನಡೆಯುತ್ತೇನೆ' ಎಂದು ತಿಳಿಸಿದರು. 'ಶಾಸಕರ ರಾಜೀನಾಮೆ ಪ್ರಕರಣವನ್ನು ಇತ್ಯರ್ಥಗೊಳಿಸಲು ಸುಪ್ರೀಂ ಕಾಲಮಿತಿ ನೀಡಿಲ್ಲ ಎಂಬುದೇ ದೊಡ್ಡ ಜವಾಬ್ದಾರಿ. ಅನಾವಶ್ಯಕವಾಗಿ ಕಾಲ ವಿಳಂಬ ಮಾಡದೆ ತೀರ್ಮಾನಿಸುವಂತೆ ಮಾರ್ಮಿಕವಾಗಿ ನುಡಿದಿದ್ದಾರೆ. ನಿಯಮಾವಳಿಗಳಿಗೆ ಒಳಪಟ್ಟು ಶಾಸನವನ್ನು ಗೌರವಿಸುವ ರೀತಿಯಲ್ಲಿ ಮುಂದಿನ ನಡೆ ಇಡುತ್ತೇನೆ ಎಂದು ಹೇಳಿದರು.



ರಾಜೀನಾಮೆ ಪ್ರಕರಣ ಇತ್ಯರ್ಥಪಡಿಸುವೆ
■ ಶಾಸಕರನ್ನು ಕರೆಸುವುದು ನನ್ನ ಜವಾಬ್ದಾರಿಯಲ್ಲ

**ಹೊಸ ಸಂಪ್ರದಾಯ ಶುರು ಮಾಡಿದೆ:** ಹಿಂದೆ ಉಮೇಶ್ ಜಾಧವ್ ಪ್ರಕರಣದಲ್ಲಿ ಹೊಸ ಸಂಪ್ರದಾಯ ಶುರು ಮಾಡಿದ್ದೇನೆ. ಅದೇ ರೀತಿಯಲ್ಲೇ ಹಾಲಿ ರಾಜೀನಾಮೆ ನೀಡಿರುವ ಶಾಸಕರ ಅರ್ಜಿಯನ್ನು ಪರಿಶೀಲಿಸುತ್ತೇನೆ. ಆತುರದ ನಿರ್ಣಯ ತೆಗೆದುಕೊಳ್ಳುವುದಿಲ್ಲ. ಶಾಸಕರು ಚುನಾಯಿತರಾಗಿರುವುದು 5 ವರ್ಷಕ್ಕೆ. ಈಗ 1 ವರ್ಷವಷ್ಟೇ ಆಗಿದೆ. ರಾಜೀನಾಮೆ ನೀಡಲು ಇರುವ ಕಾರಣದ ವಿಚಾರಣೆ ನಡೆಸಬೇಕು. ಸಂಘ -ಸಂಸ್ಥೆಗಳು ನೀಡಿರುವ ಅರ್ಜಿ ಪರಿಶೀಲನೆ ಹಂತದಲ್ಲಿದೆ ಎಂದರು.

ಸದನ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಜು.18ರಂದು ಅವಿಶ್ವಾಸ ಮಂಡನೆ ಬೆಳಗ್ಗೆ 11 ಗಂಟೆಗೆ ಆರಂಭವಾಗುತ್ತದೆ. ಉಭಯ ಪಕ್ಷಗಳು ಸೇರಿಕೊಂಡು ಮತಕ್ಕೆ ಹಾಕಿ ಅಂದರೆ ನನ್ನದೇನೂ ಆಕ್ಷೇಪಣೆಯಿಲ್ಲ, ಆದರೆ, ಚರ್ಚೆ ಮಾಡಬೇಕೆಂದು ಕೇಳಿದರೆ ಅವಕಾಶ ಇದೆ. ಮೊರಾರ್ಜಿ ದೇಸಾಯಿ ಸರ್ಕಾರದಲ್ಲಿ ವಿಶ್ವಾಸಮತ ಯಾಚನೆ ಸಂಬಂಧ 6 ದಿನಗಳು ಚರ್ಚೆ ಆಗಿತ್ತು. ಹೀಗಾಗಿ, ಈ ಹಂತದಲ್ಲಿ ಎಷ್ಟು ದಿನ ಚರ್ಚೆ ಆಗಬಹುದು ಎಂದು ಹೇಳಲು ಸಾಧ್ಯವಿಲ್ಲ. ಸದನದಲ್ಲಿ ಸಂದರ್ಭ ನೋಡಿಕೊಂಡು ಹೇಳಬೇಕಾಗುತ್ತದೆ ಎಂದರು.

ವಿಶ್ವಾಸಮತದಲ್ಲಿ ಸಾಮೂಹಿಕವಾಗಿ ಕೈ ಎತ್ತಿಸಿ ಪರ-ವಿರುದ್ಧ ಮತಗಳ ಎಣಿಕೆ ಮಾಡಿ ಫಲಿತಾಂಶ ಘೋಷಿಸಲಾಗುವುದು. ಇಲ್ಲ, ವಿಭಾಗವಾರು ಮತ ಎಣಿಕೆ ಆಗಬೇಕೆಂದರೆ ಸೈರನ್ ಮೊಳಗಿಸಿದ ನಂತರ ಅಧಿವೇಶನ ಹಾಲ್‌ನ ಎಲ್ಲಾ ಬಾಗಿಲುಗಳನ್ನು ಮುಚ್ಚಲಾಗುವುದು. ಈ ಸಂದರ್ಭದಲ್ಲಿ ಅಧಿವೇಶನದಲ್ಲಿ ಹಾಜರಿರುವ ಸದಸ್ಯರ ಪೈಕಿ ಬಲಾಬಲವನ್ನು ಪ್ರತಿ ಸಾಲಿನಂತೆ ಎಣಿಕೆ ಮಾಡಿ, ಫಲಿತಾಂಶ ನೀಡಲಾಗುವುದು ಎಂದು ಹೇಳಿದರು.

'ಅತೃಪ್ತ ಶಾಸಕರು ಯಾರೆಂಬುದು ನನಗೆ ಗೊತ್ತಿಲ್ಲ. ನನಗೆ ತಿಳಿದಿರುವುದು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಮಾತ್ರ. ರಾಜೀನಾಮೆ ನೀಡಿರುವ ಶಾಸಕರನ್ನು ಸದನಕ್ಕೆ ಕರೆಸುವುದು ನನ್ನ ಜವಾಬ್ದಾರಿಯಲ್ಲ. ಅದು ಆಯಾ ರಾಜಕೀಯ ಪಕ್ಷಗಳು, ಶಾಸಕರಿಗೆ ಬಿಟ್ಟ ವಿಚಾರ. ಶಾಸಕರು ಸದನಕ್ಕೆ ಬಂದರೆ ಹಾಜರಾತಿಗೆ ಸಹಿ ಮಾಡಬಹುದು. ಭತ್ಯೆ ಸಿಗುತ್ತದೆ. ಬಾರದಿದ್ದರೆ ಗೈರು ಹಾಜರಿ ಎಂದು ನಮೂದಿಸಲಾಗುವುದು. 'ವಿಪ್'ಗೂ ನನಗೂ ಸಂಬಂಧ ಇಲ್ಲ ಎಂದರು.